**O.S.No.250/2020** **DW-1**

ದಿನಾಂಕಃ 27-03-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.
ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಎಂ ಆರ್ ವಕೀಲರಿಂದಃ

1. ನನ್ನ ತಂದೆ ಹೆಸರು ಬಿ.ಎನ. ಸದಾಶಿವರೆಡ್ಡಿ. ನನಗೆ 3 ಜನ ಅಕ್ಕ ತಂಗಿಯರು. ನನ್ನ ಮೊದಲನೇ ಅಕ್ಕ ಬಿ.ಎಸ್. ಶಶಿಕಲಾ, ಎರಡನೆ ಬಿ.ಎಸ್.ವಸಂತಿ, ಒಬ್ಬ ತಂಗಿ ಬಿ.ಎಸ್. ಮಂಜುಳಾ ಆಗಿರುತ್ತಾರೆ. ನನ್ನ ಅಕ್ಕ ಬಿ.ಎಸ್. ವಸಂತಿ ಈ ದಾವೆಯನ್ನು ಈಗ ನಡೆಸುತ್ತಿದ್ದಾರೆ. ಕೆ.ಸಿ.ಗೋಪಾಲರೆಡ್ಡಿ ಬಿ.ಎಸ್. ವಸಂತಿರವರ ಯಜಮಾನರಾಗಿದ್ದು ಅವರೇ ಈ ದಾವೆ ಸಲ್ಲಿಸಿರುತ್ತಾರೆ. ಬಿ.ಎಸ್. ಶಶಿಕಲಾ, ಮತ್ತು ಬಿ.ಎಸ್.ವಸಂತಿ ರವರು ನನ್ನ ಮತ್ತು ನನ್ನ ತಂದೆ ಹಾಗೂ ನನ್ನ ತಂಗಿ ವಿರುದ್ಧ ಅಸಲು ದಾವೆ ಸಂಖ್ಯೆ 82/2012 ವಿಭಾಗ ಕೋರಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಮತ್ತು ಇನ್ನುಳಿದ ಪಕ್ಷಗಾರರು ದಾವೆಯನ್ನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

2. ಅಸಲು ದಾವೆ ಸಂಖ್ಯೆ 82/2012 ರ ರಾಜಿಯಲ್ಲಿ ನನಗೆ ಸರ್ವೆ ನಂ.132/10 ರಲ್ಲಿ 17 ವರೆ, ಸರ್ವೆ ನಂ.130/1 ಎ ರಲ್ಲಿ 18 ಗುಂಟೆ, ಸರ್ವೆ ನಂ.130/1 ಬಿ ರಲ್ಲಿ 6 ವರೆ ಗುಂಟೆ, ಸರ್ವೆ ನಂ.122/1 ರಲ್ಲಿ 4 ವರೆ ಗುಂಟೆ, ಸರ್ವೆ ನಂ.226 ರಲ್ಲಿ 2 ಎಕರೆ 20 ಗುಂಟೆ, ಸರ್ವೆ ನಂ.228 ರಲ್ಲಿ 18 ಗುಂಟೆ ಜಮೀನು ನನ್ನ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿ. ನನ್ನ ಸ್ವಂತ ಊರು ಬಂಟಹಳ್ಳಿ ಆಗಿರುತ್ತದೆ. ಬಂಟಹಳ್ಳಿಯಲ್ಲಿ ನನ್ನ ತಂದೆ ಕಟ್ಟಿರುವ ಮನೆ ಇರುತ್ತದೆ ಎಂದರೆ ಸರಿ. ನನಗೆ ರಾಜಿ ಮೂಲಕ ಬಂದ ಮೇಲ್ಕಂಡ ಆಸ್ತಿಗಳು ಬಂಟಹಳ್ಳಿ ಗ್ರಾಮದಲ್ಲಿ ಇರುತ್ತವೆ ಎಂದರೆ ಸರಿ.

3. ನನಗೆ ಸರ್ಜಾಪುರ ಹೋಬಳಿ ತಿಗಳಚೌಡನಹಳ್ಳಿ ಯಲ್ಲಿ ಒಂದು ಸೈಟು ಇತ್ತು ಎಂದರೆ ಸರಿ. ನಾನು ಸದರಿ ಸೈಟಿನಲ್ಲಿ ಮನೆ ಕಟ್ಟಿಸಬೇಕೆಂದು ಡಿ.ಸಿ.ಬಿ. ಬ್ಯಾಂಕ ರಾಜಾಜಿನಗರದಲ್ಲಿ ದಿಃ- 26-05-2018 ರಂದು ರೂ.17,28,461/- ಸಾಲ ಪಡೆದಿರುತ್ತೇನೆ ಎಂದರೆ ಸರಿ. ಮನೆ ಸಾಲ ಪಡೆದ ನಂತರ ನಾನು ಸೈಟಿನಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ್ದೆ ಎಂದರೆ ಸರಿ. ನಿಪಿ-4 ರಲ್ಲಿ ಪ್ರತಿ ಪುಟಕ್ಕೆ ನಾನೇ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-4 ರಲ್ಲಿ ಇರುವ ಭಾವಚಿತ್ರ ನನ್ನದೇ ಆಗಿರುತ್ತದೆ.

4. 2019 ರಲ್ಲಿ ನನಗೆ ಮನೆ ಕಟ್ಟಲು ಹಣದ ಅಭಾವ ಇರುವುದರಿಂದ ವಾದಿ ಗೋಪಾಲರೆಡ್ಡಿ ಮತ್ತು ನನ್ನ ಅಕ್ಕ ವಾಸಂತಿ ರವರಿಗೆ ರೂ.14,50,000/- ಸಾಲ ಕೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ಅಕ್ಕ ವಾಸಂತಿ ಹಣ ನೀಡುವುದಾಗಿ ನನಗೆ ಬರುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರಾದ ಎಂ.ಎನ್. ಗಿರೀಶ ಮತ್ತು ಬಾಲಾಜಿ ರವರನ್ನು ವಾದಿಯ ಮನೆಗೆ ಕರೆದುಕೊಂಡು ಹೋಗಿ ಅವರ ಸಮಕ್ಷಮ ನಾನು ವಾದಿ ಕಡೆಯಿಂದ ರೂ.14,50,000/- ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಹಣ ಪಡೆದ ಒಂದು ವಾರದ ನಂತರ ದಿಃ- 13-06-2019 ರಂದು ವಾದಿ ಮತ್ತು ಸಾಕ್ಷಿದಾರರು ನನ್ನ ಅಕ್ಕ ವಾಸಂತಿ ಎಲ್ಲರೂ ದಾವಾ ಸ್ವತ್ತಿನ ಹತ್ತಿರ ಬಂದು ವ್ಯಾಪಾರ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಾತುಕತೆಯಲ್ಲಿ ನಾನು ವಾದಿಗೆ ದಾವಾ ಸ್ವತ್ತು ರೂ.15,00,000/- ಕ್ಕೆ ಮಾರಾಟ ಮಾಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತನ್ನು

ರೂ.15,00,000/- ಕ್ಕೆ ಖರೀದಿಸಲು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಮಾತುಕತೆಯಲ್ಲಿ ನಾನು ವಾದಿಯಿಂದ ಈಗಾಗಲೇ ರೂ.14,50,000/- ಪಡೆದುಕೊಂಡಿದ್ದು ಕರಾರುಪತ್ರ ಬರೆದ ಒಂದು ವರ್ಷದ ಒಳಗಾಗಿ ಸ್ವತ್ತಿನ ಎಲ್ಲ ಅಗತ್ಯ ದಾಖಲಾತಿಗಳನ್ನು ಒದಗಿಸಿ ವಾದಿಗೆ ತಿಳಿಸಿ ಇನ್ನುಳಿ ಬಾಕಿ ಹಣ ರೂ.50,000/- ಪಡೆದುಕೊಂಡು ಕ್ರಯಪತ್ರ ಬರೆದುಕೊಡುವುದಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಪತ್ರದಲ್ಲಿ ಒಂದು ವೇಳೆ ನಿಗದಿತ ಸಮಯದಲ್ಲಿ ವಾದಿಗೆ ಬರೆದು ಕೊಡದೇ ಇದ್ದಲ್ಲಿ ವಾದಿ ಕೋರ್ಟಿನ ಮುಖಾಂತರ ದಾವಾ ಸ್ವತ್ತಿನ ನೋಂದಣಿ ಮಾಡಿಕೊಳ್ಳಬಹುದು ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಸಾಕ್ಷಿದಾರರನ್ನು ಮಾತುಕತೆ ಆದ ದಿನ ಪತ್ರ ಬರಹಗಾರರಾದ ಬಿ.ವಿ. ಸತ್ಯನಾರಾಯಣ ರವರ ಹತ್ತಿರ ಪತ್ರ ಬರೆಯಲು ವಾದಿ ಮತ್ತು ವಾಸಂತಿರವರನ್ನು ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಿ.ವಿ. ಸತ್ಯನಾರಾಯಣರಾವ್ ರವರಿಗೆ ವ್ಯಾಪಾರದ ಮಾತುಕತೆಯಂತೆ ಪತ್ರ ಬರೆಯಲು ಹೇಳಿರುತ್ತೇನೆ ಎಂದರೆ ಸರಿಯಲ್ಲ.ಬಿ.ವಿ. ಸತ್ಯನಾರಾಯಣರಾವ್ ಪತ್ರ ಬರೆದ ನಂತರ ಅವರು ನಮಗೆ ಓದಿ ಹೇಳಿದ್ದು ನಂತರ ನಾನು ಸರಿ ಇದೆ ಎಂದು ಹೇಳಿ ನಿಪಿ-4 ರ ಪ್ರತಿ ಪುಟಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-4 ಕ್ಕೆ ಸಹಿ ಮಾಡಿದ ನಂತರ ವಾದಿ ನಿಪಿ-4 ರ ಪ್ರತಿ ಪುಟಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ನಿಪಿ-4 ಕ್ಕೆ ಸಹಿ ಮಾಡಿದ ನಂತರ ಸಾಕ್ಷಿದಾರರಾದ ಗೀರಿಶ್ ಮತ್ತು ಬಾಲಾಜಿ ಸಾಕ್ಷಿದಾರರಾಗಿ

ನಿಪಿ-4 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ಕ್ಕೆ ನಾವು ಮತ್ತು ಸಾಕ್ಷಿದಾರರು ಸಹಿ ಮಾಡಿದ ನಂತರ ಪತ್ರ ಬರಹಗಾರರಾದ ಬಿ.ವಿ. ಸತ್ಯನಾರಾಯಣರಾವ್ ನಿಪಿ-4 ಕ್ಕೆ ಸಹಿ ಮಾಡಿ ಮೊಹರು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನಾನು, ವಾದಿ ಮತ್ತು ಸಾಕ್ಷಿದಾರರನ್ನು ಉಪನೋಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಹೋಗಿ ನಿಪಿ-4 ನೋಂದಣಿ ಮಾಡಿಸಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ದಿಃ- 13-06-2019 ರಂದು ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸರ್ವರ್ ಇಲ್ಲ ಎಂದು ಮರುದಿನ ಬರುವಂತೆ ನಮಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

6. ದಿಃ- 14-06-2019 ರಂದು ನಾನೇ ವಾದಿ, ಸಾಕ್ಷಿದಾರರು ಮತ್ತು ಪತ್ರ ಬರಹಗಾರರು ಬಿ.ವಿ. ಸತ್ಯನಾರಾಯಣರಾವ್ ರವರನ್ನು ಉಪನೋಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಹೋಗಿ ನಿಪಿ-4 ವಾದಿಯ ಹೆಸರಿಗೆ ನೋಂದಣಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಂದಣಿ ಆದ ನಂತರ ನಿಪಿ-4 ವಾದಿ ಗೋಪಾಲರೆಡ್ಡಿರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿ ಬಾಕಿ ಉಳಿದ ಹಣ ರೂ.50,000/- ನನಗೆ ನೀಡಿ ಕ್ರಯಪತ್ರ ಬರೆದುಕೊಡುವಂತೆ ಸಾಕಷ್ಟು ಸಲ ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನನಗೆ ರೂ.50,000/- ಪಡೆದು ಕ್ರಯಪತ್ರ ಬರೆದುಕೊಡುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆದರೆ ನಾನು ವಾದಿಯಿಂದ ರೂ.50,000/- ಪಡೆದಿರುವುದಿಲ್ಲ ಮತ್ತು ಅವರಿಗೆ ದಾವಾ ಸ್ವತ್ತಿನ ನೋಂದಣಿ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7. ದಿಃ- 15-06-2020 ರಂದು ವಾದಿ ನನಗೆ ವಕೀಲರ ಮುಖಾಂತರ ನೋಟೀಸು ಕಳುಹಿಸಿದ್ದರು ಎಂದರೆ ಸರಿ. ವಾದಿ ನನಗೆ ನೋಟೀಸನಲ್ಲಿ ನೋಟೀಸು ತಲುಪಿದ 15 ದಿನಗಳಲ್ಲಿ ರೂ.50,000/- ಪಡೆದು ದಾವಾ ಸ್ವತ್ತಿನ ಕ್ರಯ ಪತ್ರ ಬರೆದುಕೊಡುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ನೋಟೀಸನ್ನು ಪಡೆದಿರುತ್ತೇನೆ. ನೋಟೀಸು ತಲುಪಿದ ನಂತರ ನಾನು ವಾದಿ ಕಡೆಯಿಂದ ರೂ.50,000/- ಪಡೆದಿರುವುದಿಲ್ಲ ಮತ್ತು ವಾದಿಗೆ ದಾವಾ ಸ್ವತ್ತಿನ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಪ್ರಶ್ನಿಸಿ ದಾವೆ ಸಲ್ಲಿಸಿರುವುದಿಲ್ಲ. ನಾನು ನಿಪಿ-7 ರಂತೆ ವಾದಿ ವಕೀಲರಿಗೆ ನೋಟೀಸಗೆ ರಿಪ್ಲೈ ನೀಡಿರುತ್ತೇನೆ ಎಂದರೆ ಸರಿ. ನಾನು ರಿಪ್ಲೈ ನೋಟೀಸನಲ್ಲಿ ವಾದಿಯಿಂದ ರೂ.10,00,000/- ಒಂದುವರೆ ಪ್ರತಿಶತ ಬಡ್ಡಿಯಂತೆ ಸಾಲ ಪಡೆದಿದ್ದೇನೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿರುವ ವಿಚಾರ ನಿಪಿ-4 ರಲ್ಲಿ ಬರೆಸಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ತಾನು ನಿಪಿ-4 ಬರೆದುಕೊಟ್ಟಿರುದಿಲ್ಲ ಎಂದು ಹೇಳುತ್ತಾರೆ. ನಾನು ರಿಪ್ಲೈ ನೊಟೀಸನಲ್ಲಿ ವಾದಿ ಜಮೀನು ಕೊಂಡುಕೊಳ್ಳುವುದಾಗಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

8. ವಾದಿ ಯಾರ ಕಡೆಯಿಂದ ಜಮೀನು ಕೊಂಡುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿ ಯಾರ ಕಡೆಯಿಂದ ಜಮೀನು ಕೊಂಡುಕೊಂಡಿಲ್ಲ ನಾನೇ ವಾದಿಗೆ ದಾವಾ ಸ್ವತ್ತಿನ ನೋಂದಾಯಿತ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ- 14-06-2019 ರಂದು ದಾವಾ ಸ್ವತ್ತಿನ ಮೌಲ್ಯ 15 ಲಕ್ಷ ಇತ್ತು ಅದಕ್ಕಿಂತ ಜಾಸ್ತಿ ಇತ್ತು ಎಂದು

ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತಿಗಳಚೌಡನಹಳ್ಳಿಯಲ್ಲಿ ವಾದಿಯಿಂದ ರೂ.14,50,000/- ಮತ್ತು ಬ್ಯಾಂಕಿನಿಂದ ಸಾಲ ಪಡೆದು ಸೈಟಿನಲ್ಲಿ ಮೂರು ಅಂತಸ್ತಿನ ಮನೆ ಕಟ್ಟಿಸಿರುತ್ತೇನೆ ಎನ್ನುವ ಪ್ರಶ್ನೆಗೆ ಸಾಕ್ಷಿ ಮನೆ ಕಟ್ಟಿಸಿರುತ್ತೇನೆ ಆದರೆ ವಾದಿಯಿಂದ ರೂ.10,00,000/- ಕೈ ಸಾಲ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ನಾನು ಕಟ್ಟಿರುವ ಮನೆಯಲ್ಲಿ ಐದು ಮನೆ 4 ನೇ ಅಂತಸ್ತಿನಲ್ಲಿ ಒಂದು ಕೋಣೆ ಇರುತ್ತದೆ ಎಂದರೆ ಸರಿ. ನಾನು ನೆಲಮಹಡಿಯಲ್ಲಿ ವಾಸವಾಗಿದ್ದು ಮೇಲಿನ ಅಂತಸ್ತು ಬಾಡಿಗೆಗೆ ನೀಡಿರುತ್ತೇನೆ ಎಂದರೆ ಸರಿ. ವಾದಿಯಿಂದ ಮನೆ ಕಟ್ಟಲು ರೂ.14,50,000/- ವಾದಿಯಿಂದ ಪಡೆದು ಮನೆಯನ್ನು ಕಟ್ಟಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದು ಮತ್ತು ದಾವಾ ಸ್ವತ್ತು ಮಾರಾಟ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಬಡ್ಡಿಯ ಮೇಲೆ ಸಾಲ ಪಡೆದಿರುತ್ತೇನೆ ಎಂದು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಗೆ ನಿಪಿ-4 ರಂತೆ ದಾವಾ ಸ್ವತ್ತಿನ ಕ್ರಯಪತ್ರ ಬರೆದು ಕೊಡುವುದನ್ನು ತಪ್ಪಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿಗೆ ಸರ್ಜಾಪುರ ಡೀಪೋ ಹತ್ತಿರ ಟು-ವೀಲರ್ ವರ್ಕ ಶಾಪ್ ಇಟ್ಟುಕೊಂಡಿದ್ದೆ ಎಂದರೆ ಸರಿ. ಈಗ ನಾನು ವರ್ಕ ಶಾಪ್ ನನ್ನ ಮನೆಯ ಹತ್ತಿರ ಇಟ್ಟುಕೊಂಡಿದ್ದೇನೆ ಎಂದರೆ ಸರಿ.

**O.S.No.250/2020** **DW-1**

<u>ಮರು ವಿಚಾರಣೆಃ- ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಕೇ. ಹೇ. ಸರಿ ಇದೆ.

Sd/-
(ದಯಾನಂದ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.